# ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬನಹಟ್ಟಿಯ ಪಾತ್ರ

**ಸಂಗಮೇಶ ಕಚ್ಚು*** & **ಎಂ.ಎನ್. ಬೆನ್ನೂರ****

**DOI: https://doi.org/10.5281/zenodo.19501550**

**ABSTRACT**

ಭಾರತವು ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯಲು ಯತ್ನಿಸುತ್ತಿರುವಾಗ ಹಲವಾರು ಕಡೆಗಳಲ್ಲಿ ಯೋಧರು ಬ್ರಿಟಿಷರಿಗೆ ಅಸಹಕಾರ ತೋರುವ ಕೆಲಸಗಳನ್ನು ಮಾಡುತ್ತಿದ್ದರು. ಅದೇ ರೀತಿ ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ ತಾಲೂಕಿನ (ಅಂದಿನ ಬಿಜಾಪುರ ಜಿಲ್ಲೆ ಜಮಖಂಡಿ ತಾಲೂಕಿನ) ಬನಹಟ್ಟಿ ವೀರರು ಆಂಗ್ಲರ ವಿರುದ್ಧ ಚಳುವಳಿ ಆರಂಭಿಸಿದರು. ಮಾಸ್ತರರ ತಂಡವು ಹಲವಾರು ಕಡೆಗಳಲ್ಲಿ ಸಿಂದಿ ಗಿಡ ಕಡಿಯುವುದು, ಚಾವಡಿಗೆ ಮತ್ತು ಅಂಚೆ ಕಚೇರಿಗೆ ಬೆಂಕಿ ಹಾಕುವುದು, ತಾರತಂತಿ ಕಿತ್ತು ಕಂಬ ಕೆಡವುವುದು, ಸೇತುವೆ ಮತ್ತು ರೈಲ್ವೆ ಹಳಿ ಕಿತ್ತು ಹಾಕುವ ಕಾರ್ಯ ಮಾಡಿ ಬ್ರಿಟಿಷರ ಆಡಳಿತಕ್ಕೆ ವಿರೋಧ ವ್ಯಕ್ತಪಡಿಸಿದರು. ಅಲ್ಲದೆ ಕ್ರಾಂತಿಕಾರಿ ಭಾಷಣ ಮಾಡಿ ಜನರನ್ನು ಸಂಘಟಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಅಯ್ಯಪ್ಪ ಬಾಗಲಕೋಟೆ, ರಾಮಪ್ಪ ಚಿಂಚೂರ್ , ಬನ್ನಪ್ಪ ಅಜ್ಜಪ್ಪಗೊಳ, ಬಸವಂತ ಚನಾಳ, ಕಲ್ಯಾಣಪ್ಪ ತುಂಗಳ, ಚಿನ್ನಪ್ಪ ಕಾಡಪ್ಪ ದಬಾಡಿ, ಲಕ್ಷ್ಮಣಪ್ಪ ಮೋಪಗಾರ, ಮಲ್ಲಪ್ಪ ಬುಟ್ಟಿನವರ, ತುಕಾರಾಂ ಕೋಪರ್ಡೆ, ದಾದೋಬಾ ಜಾದವ , ಬಸಪ್ಪ ಪಟ್ಟಣ, ಸಿದ್ದಪ್ಪ ಹಾಲಸಿಕರ, ನಿಂಗಪ್ಪ ಆಂಟಿನ, ಸಿದ್ದಪ್ಪ ಕೆಸರಗೊಪ್ಪ, ಮಲ್ಲಪ್ಪ ಕುಂಬಾರ, ಬಸವಣ್ಣಪ್ಪ ಮಟ್ಟಿಕಲ್ಲಿ, ಗಂಗಾಧರ ಟೋಗುಲ್ಲ, ಇವರು ಸ್ವಾತಂತ್ರ್ಯದ ಕಡೆ ತಮ್ಮ ಒಲವನ್ನು ತೋರಿದರು. ಇದರಿಂದ ಬನಹಟ್ಟಿಯು ಸ್ವಾತಂತ್ರ್ಯ ವೀರರ ಆಯಕಟ್ಟಿನ ಸ್ಥಳವಾಯಿತು.

**KEYWORDS:** ಇಂಚಗೇರಿ, ತಾರತಂತಿ, ವಿದೇಶಿ ಬಟ್ಟೆ, ಬಹಿಷ್ಕಾರ, ಚಳುವಳಿ.

* **ಸಂಗಮೇಶ ಕಚ್ಚು,** ಎಂ.ಎ., ಪಿ.ಜಿ. ಡಿಪ್ಲೊಮಾ ಇನ್ ಆರ್ಕೈವಲ್ ಮೋಡಿ ಸ್ಟಡೀಸ್.

** **ಡಾ. ಎಂ.ಎನ್. ಬೆನ್ನೂರ,** ಇತಿಹಾಸ ವಿಭಾಗ ಮುಖ್ಯಸ್ಥರು, ಎಸ್.ಟಿ.ಸಿ. ಕಾಲೇಜು, ಬನಹಟ್ಟಿ.

**ಪೀಠಿಕೆ:**

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯಲ್ಲಿ ಸ್ಥಳೀಯವಾಗಿ ತೇರದಾಳ ಬನಹಟ್ಟಿ ಪ್ರದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯು ಪರಿಣಾಮಕಾರಿಯಾಗಿ ಪ್ರಭಾವವನ್ನು ಬೀರಿತು. ಇದು ಸ್ಥಳೀಯ ಮಟ್ಟದಿಂದ ಆರಂಭಗೊಂಡು ರಾಷ್ಟ್ರೀಯತೆಯೆಡೆಗೆ ಸಾಗಿತ್ತು ಎನ್ನಲಾಗಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಮೊದಲು ಉತ್ತರ ಭಾರತದಲ್ಲಿ ಆರಂಭವಾಯಿತು. ಕ್ರಮೇಣವಾಗಿ ಅದು ದಕ್ಷಿಣ ಭಾರತವನ್ನು ಆಕ್ರಮಿಸಿತು. ದಕ್ಷಿಣ ಪ್ರಾಂತ್ಯಗಳಲ್ಲಿ ಮುಂಬೈ, ಕರ್ನಾಟಕದ ಭಾಗಗಳಿಂದ ಸ್ವಾತಂತ್ರ್ಯದ ಹೋರಾಟದ ರಣಕಹಳೆಯು ಕೇಳಲು ಆರಂಭವಾಯಿತು. ಅದರಲ್ಲಿ ಬಾಗಲಕೋಟೆ ಜಿಲ್ಲೆಯ (ಅಂದಿನ ಬಿಜಾಪುರ ಜಿಲ್ಲೆಯ) ಜಮಖಂಡಿ ತಾಲೂಕಿನಲ್ಲಿ, ಬನಹಟ್ಟಿಯಲ್ಲಿ, ಮುಧೋಳ, ತುಂಗಳ-ಕುಂಚನೂರು ಮತ್ತು ಹಲಗಲಿ ಈ ಪ್ರದೇಶದಲ್ಲಿ ಸಹ ಸ್ವಾತಂತ್ರ್ಯ ಚಳುವಳಿಯ ಆರಂಭವನ್ನು ಕಾಣುತ್ತೇವೆ. ಇದಕ್ಕೆ ಸ್ಥಳೀಯ ಬುದ್ಧಿಜೀವಿಗಳು ಚಳುವಳಿಯಲ್ಲಿ ಕಲಕಂಬ ಮಾಸ್ತರು, ಮಾಧವಾನಂದರು (ಇಂಚಗೇರಿ) ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಪರಿಣಾಮವಾಗಿ ಹಲವಾರು ಗ್ರಾಮ, ನಗರ, ತಾಲೂಕು, ಜಿಲ್ಲೆ, ಮತ್ತು ರಾಜ್ಯದ ಜನರು, ವಿದ್ಯಾರ್ಥಿಗಳು ಚಳುವಳಿಗಳಲ್ಲಿ ಪಾಲ್ಗೊಂಡರು. 1942ರ ವೇಳೆಗೆ ತೀವ್ರವಾಗಿ ರಾಷ್ಟ್ರೀಯ ನಾಯಕರ ಸಂಪರ್ಕವು ಸ್ಥಳೀಯ ಹೋರಾಟಗಾರರೊಂದಿಗೆ ಇತ್ತು ಎನ್ನಲಾಗಿದೆ.

**ಮಹಾಲಿಂಗಪ್ಪ ಗಿರಮಲ್ಲಪ್ಪ ಕಲಕಂಬ:**

ಮಹಾಲಿಂಗಪ್ಪ ಕಲಕಂಬ ಇವರು ತಂದೆ ಗಿರಮಲ್ಲಪ್ಪ ತಾಯಿ ಕಾಳವ್ವ ಇವರ ಉದರದಲ್ಲಿ ಡಿಸೆಂಬರ್ 1904 ಬನಹಟ್ಟಿಯಲ್ಲಿ ಜನಿಸಿದರು. ಕಲಕಂಬ ಮಾಸ್ತರೆಂದು ಪ್ರಖ್ಯಾತಿ ಹೊಂದಿದ ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಬನಹಟ್ಟಿಯಲ್ಲಿ ಪಡೆದರು. ಜಮಖಂಡಿ ಸಂಸ್ಥಾನದ ಅರಸರಾದ ಪಟವರ್ಧನರು ಮರಾಠಿ ಭಾಷಾಪ್ರಿಯರಾಗಿದ್ದರಿಂದ ಮೋಡಿ ಶಿಕ್ಷಣವೇ ಬನಹಟ್ಟಿಯಲ್ಲಿ ದೊರೆಯುತ್ತಿತ್ತು. ಕಲಕಂಬರು 4ನೇ ವರ್ಗದವರೆಗೆ ಬನಹಟ್ಟಿಯಲ್ಲಿ ಕಲಿತರು, ನಂತರ ಇಂಗ್ಲಿಷ್ ಶಿಕ್ಷಣಕ್ಕಾಗಿ ರಬಕವಿಗೆ ಹೋದರು. ರಬಕವಿಯ ಶ್ರೀ ಡಿ. ಸಿ. ಪಾವಟೆಯವರು ಕಲಿತದ್ದು ತಮ್ಮ ಓಣಿಯಲ್ಲಿಯೇ, ಮನೆ ಸಮೀಪದ ಶ್ರೀ ರತ್ನಪ್ಪಾ ನಾಮದೇವ ಕೋಪರ್ಡೆಯವರ ಜೊತೆಗೆ ಓಡುತ್ತಾ ಶಾಲೆಗೆ ಹೋಗುತ್ತಿದ್ದರು. ರಬಕವಿಯ ನಂತರ ಮ್ಯಾಟ್ರಿಕ್ ಶಿಕ್ಷಣವನ್ನು ಮುಧೋಳದಲ್ಲಿ ಕಲಿತರು. ಮ್ಯಾಟ್ರಿಕ್ ಪಾಸ್ ಆದ ನಂತರ ಹಾರ-ತುರಾಯಿ ಹಾಕಿ ಆರತಿಮಾಡಿ ಮೆರವಣಿಗೆ ಮಾಡಿದರು. ಇಂಗ್ಲಿಷ್ ಭಾಷೆಯ ಮೇಲೆ ಹಿಡಿತ ಸಾಧಿಸಿದ್ದರಿಂದ ಗುಳೇದಗುಡ್ಡದಲ್ಲಿ ಶಿಕ್ಷಕರಾಗಿ ನೇಮಕಗೊಂಡರು. ಶಾಲೆಯ ಆಡಳಿತಾಧಿಕಾರಿಗಳ ದುರಾಡಳಿತಕ್ಕೆ ಬೇಸತ್ತು, ಒಂದೇ ವರ್ಷದಲ್ಲಿ ರಾಜೀನಾಮೆ ನೀಡಿ ಹೊರಬಂದರು. ಅಂದಿನಿಂದ ಅವರನ್ನು ಶ್ರೀ ಕಲಕಂಬ ಮಾಸ್ತರೆಂದು ಕರೆಯತೊಡಗಿದರು. ನಂತರದಲ್ಲಿ 2 ಮಗ್ಗಗಳನ್ನು ಇಟ್ಟುಕೊಂಡು ಧರ್ಮಪತ್ನಿ ಕಾಳವ್ವ ಇವರು ಪ್ರೇರಣೆ ನೀಡಿದರು. ನಂತರದಲ್ಲಿ ಅವರಿಗೆ ಈ ಕೆಲಸದಲ್ಲಿ ಸಹ ಅಭಿರುಚಿ ದೊರೆಯದೆ ಹೋರಾಟದಲ್ಲಿ ಧುಮುಕಿದರು. ಸ್ವಾತಂತ್ರ್ಯ ವಿಚಾರವಾಗಿ ದೇಶಭಕ್ತರಾದ ಪ್ರಕಾಂಡ ಪಂಡಿತರಾದ ಎಂ. ಎನ್. ರಾಯ್ ಲೇಖನಗಳನ್ನು ಮತ್ತು ಬರಹಗಳನ್ನು ಓದಿಕೊಂಡು ಮತ್ತು ಶ್ರೀ ಅರವಿಂದ ಘೋಷರ, ರವೀಂದ್ರನಾಥ ಟ್ಯಾಗೋರ್ ಅವರ ವಿಚಾರಗಳಿಂದ ಪ್ರೇರಣೆಗೊಂಡು ಸ್ವಾತಂತ್ರ್ಯ ಹೋರಾಟ ಆರಂಭಿಸಿದರು.

**ಕೊಡುಗೆಗಳು:**

1924 ರ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಆಗಮಿಸಿದ ಮಹಾತ್ಮ ಗಾಂಧಿ,

ಜವಾಹರಲಾಲ್ ನೆಹರು, ಡಾ. ಬಾಬು ರಾಜೇಂದ್ರ ಪ್ರಸಾದ್ ಅವರ ಭಾಷಣ ಕೇಳಿದರು. ಇದರ ಪ್ರೇರಣೆಗೆ ಒಳಗಾಗಿದ್ದರು. ಗಾಂಧೀಜಿಯವರ ಪಾನನಿಷೇಧ ಚಳುವಳಿಯು ಪ್ರಭಾವ ಬೀರಿತು. ಬನಹಟ್ಟಿಯಿಂದ 2 ಕಿ.ಮೀ. ದೂರದಲ್ಲಿದ್ದ ಹೊಸೂರು ಗ್ರಾಮಕ್ಕೆ ಹಳ್ಳಗಳಿದ್ದವು, ಹಳ್ಳಗಳಲ್ಲಿ ಸಿಂದಿ ಬನ ಬೆಳೆದು ನಿಂತಿತ್ತು ಅವುಗಳನ್ನು ಕಡಿದು ಹಾಕಿದರು. ಕಲಕಂಬ ಮಾಸ್ತರರ ನೇತೃತ್ವದಲ್ಲಿ ವಿದೇಶಿ ಬಟ್ಟೆ ಬಹಿಷ್ಕಾರ ಚಳುವಳಿ ಆರಂಭವಾಯಿತು. ಆ ಸಂದರ್ಭದಲ್ಲಿ ಬನಹಟ್ಟಿಯಲ್ಲಿ ವಿದೇಶಿ ಬಟ್ಟೆಗಳಿಗೆ ಚೌಕಿಯಲ್ಲಿ ಬೆಂಕಿ ಹಚ್ಚಿದರು.

ಬನಹಟ್ಟಿಯ ಮಲ್ಲಿಕಾರ್ಜುನ ದೇವಸ್ಥಾನದ ಅಂಗಳದಲ್ಲಿ ಸಭೆ ಸೇರಿಸಿ ರಾಷ್ಟ್ರ ಭಕ್ತಿ ಬಗ್ಗೆ ಭಾಷಣ ಮಾಡುವಾಗ ಜಮಖಂಡಿ ಪೊಲೀಸ್ ಪಾರ್ಟಿ ಬಂದು ಕಲಕಂಬರನ್ನು ಬಂಧಿಸಲು ಬಂದಾಗ ಸ್ಥಳೀಯ ಹೆಣ್ಣು ಮಗಳು ಗೌರವ್ವ ವಿಭೂತಿ, ಕಲಕಂಬರನ್ನು ಮುಟ್ಟಿದರೆ ಅವರ ಗಂಟಲ ಹರಿದು ರಕ್ತ ಕುಡಿಯುತ್ತೇನೆ ಎಂದು ಹೇಳಿದಳು. ಈ ರೀತಿ ಕಲಕಂಬರು ರಾಷ್ಟ್ರಕ್ಕಾಗಿ ತರುಣರ ಸೈನ್ಯ ಕಟ್ಟುತ್ತಿದ್ದರು. ಕಲಕಂಬರು ಗಾಂಧೀಜಿಯವರ ಪ್ರೇರಣೆಯಿಂದ ಹರಿಜನರನ್ನು ಕರೆದುಕೊಂಡು ಹೋಟೆಲ್ ಮತ್ತು ಎಲ್ಲ ದೇವಾಲಯಗಳ ಪ್ರವೇಶ ಮಾಡಿದರು. ಬ್ರಿಟಿಷರನ್ನು ಮತ್ತು ಪುರೋಹಿತ ವರ್ಗವನ್ನು ಹತ್ತಿಕ್ಕಿದರು.

ಹೊಸೂರು ಹಳ್ಳದಲ್ಲಿನ ಸಿಂದಿ ಮರಗಳನ್ನು ಕಡಿದರ ಪರಿಣಾಮವಾಗಿ ಸರಕಾರವು 7 ಜನರನ್ನು ಬಂಧಿಸಿ ಕಾರಾಗೃಹದಲ್ಲಿ ಇಡಲಾಯಿತು. ಎರಡನೇ ಸಲ 14 ಜನರನ್ನು ಬಂಧಿಸಿದರು. ಅದರಲ್ಲಿ ಮಾಸ್ತರರು, ಶಿವಯೋಗಪ್ಪ ವಡವಡಗಿ, ಪುಸಾರಾಮ ಡಾಗಾ ಇವರು ತಾವು ಮಾಡಿದ್ದು ತಪ್ಪೆಂದು ಒಪ್ಪಿಕೊಳ್ಳದೆ ದಿನಾಂಕ 25/10/1930 ರಂದು 6 ತಿಂಗಳು ಶಿಕ್ಷೆ ಅನುಭವಿಸಿದರು. ಒಂದು ಸಭೆಯಲ್ಲಿ ಜಮಖಂಡಿ ಸಂಸ್ಥಾನಿಕರನ್ನು ಖಂಡಿಸಿ ಮಾತನಾಡಿದ್ದರಿಂದ ಮಾಸ್ತರರಿಗೆ ದಿನಾಂಕ 26/06/1939 ರಂದು ಇಂಡಿಯನ್ ಸಿವಿಲ್ ಕೋಡ್ ಕಲಂ 124(A) ಪ್ರಕಾರ ಒಂದು ವರುಷ 10 ತಿಂಗಳ ಶ್ರಮ ಶಿಕ್ಷೆ ಮತ್ತು 2000 ದಂಡ ವಿಧಿಸಿದರು. ದಂಡ ನೀಡಲು ಆಗದಿದ್ದಾಗ 26/6/1930 ರಿಂದ 20/06/1941 ರವರೆಗೆ ಶಿಕ್ಷೆ ಅನುಭವಿಸಿದರು.

ಮಾಸ್ತರರು ಗುಪ್ತವಾಗಿ ಅಥಣಿಯ ನಾರಾಯಣ ಪಾಂಡೆಯವರಿಗೆ 300 ಕಾಸುಕೊಟ್ಟರು ಅವರೆಲ್ಲ ಸೇರಿ ಅಂದರೆ ನಾಮದೇವ ಕೋರ್ಪಡೆ, ಗಂಗಪ್ಪಾ ದಭಾಡಿ ಎಲ್ಲರೂ ಸೇರಿ ಶೇಡಬಾಳ ಸ್ಟೇಷನ್ ಸುಡುವ ಕಾರ್ಯಕ್ರಮವಿತ್ತು. ಆಗ ಮಾಸ್ತರರು ತುರ್ತು ಸಭೆ ಕರೆದು ಅಥಣಿ ಜೈಲು ಒಡೆದು ಅಲ್ಲಿಂದ ಬಂಧಿತರನ್ನು ಬಿಡಿಸುವ ಕಾರ್ಯ ಮಾಡಿದರು. ಮಿರಜ್ ಮತ್ತು ಬೆಂಗಳೂರು ರೈಲ್ವೆ ಹಳಿ ಕಿತ್ತು ಸಂಚಾರಕ್ಕೆ ಅಡ್ಡಿ ಮಾಡುವುದು ಮತ್ತು ಮುಂಬಯಿ ಗವರ್ನರ್ ಬೆಳಗಾವಿಯಿಂದ ಪುಣೆಗೆ ಹೊರಟಾಗ ವಿರೂಪಾಕ್ಷ ಅಂಗಡಿಯವರು ಘಟಪ್ರಭಾ ಸೇತುವೆಗೆ ಬಾಂಬು ಇಟ್ಟಿದ್ದರು. ಈ ರೀತಿಯ ಕಾರ್ಯಗಳನ್ನು ಮಾಸ್ತರರು ಮಾಡಿಸುತ್ತಿದ್ದರು. 1942 ರ ಆಗಸ್ಟ್ 8 ರಂದು ಮುಂಬೈ ಗೋವಾಲಿಯಾ ಮೈದಾನದಲ್ಲಿ ಎ.ಐ.ಸಿ.ಸಿ. ಸಭೆಯಲ್ಲಿ ಚಲೇಜಾವ್ ಚಳುವಳಿ ಗೊತ್ತುವಳಿ ಪಾಸಾಯಿತು. 1942 ಆಗಸ್ಟ್ 15 ರಂದು ಕಲಕಂಬ ಮಾಸ್ತರರು ಮತ್ತು ಸ್ವಾತಂತ್ರ್ಯ ಯೋಧರಾದ ಅನಂತರಾವ್ ಸಾಬಡೆ, ಟಿ.ಆರ್.ನೇಷ್ಠಿ, ವಾಮನರಾವ್ ಬಿದರಿ, ಮುನವಳ್ಳಿ ವಕೀಲರ ಸಮ್ಮುಖದಲ್ಲಿ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಲು ಪ್ರತಿಜ್ಞೆ ಮಾಡಿದರು. ನಂತರ ಸಾವಳಗಿ, ಕಾಜಿ ಬೀಳಗಿ, ಕುಂಚನೂರ, ಮುಧೋಳ, ಮಹಾಲಿಂಗಪುರ ಮೊದಲಾದ ಊರುಗಳಿಗೆ ಹೋಗಿ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚಿದರು. ಇದೇ ಸಂದರ್ಭದಲ್ಲಿ ನಿಂಗಪ್ಪಾ ಆಂಟಿನ, ಚಿನ್ನಪ್ಪಾ ದಬಾಡಿ, ನಾಮದೇವ ಕೊಪರ್ಡೆ ಮೊದಲಾದ ಯೋಧರು ಕೂಡಿಕೊಂಡು ಸಿದ್ದಾಪುರದಿಂದ ಶಿರೋಳವರೆಗಿನ ತಾರ-ತಂತಿ ಹರಿದರು,

ಬಾವಿಗೆ ಎಸೆದರು. ಇದಕ್ಕೆ ಕಾರಣ ಶ್ರೀ ಕಲಕಂಬ ಮಾಸ್ತರರೇ ಕಾರಣ ಎಂದು ತಿಳಿದು ಅವರನ್ನು ಎಲ್ಲಿ ಸಿಕ್ಕಲ್ಲಿ ಗುಂಡು ಹಾಕಲು ಬ್ರಿಟಿಷರು ಅನುಮತಿ ನೀಡಿದರು. ಹಿಡಿದುಕೊಟ್ಟವರಿಗೆ 5000 ಬಹುಮಾನವನ್ನು ನೀಡುತ್ತೇವೆ ಎಂದರು. ಈ ಸುದ್ದಿ ತಿಳಿದ ಮಾಸ್ತರರು ವೇಷ ಬದಲಿಸಿಕೊಂಡು ಸ್ವಾತಂತ್ರ್ಯದ ಕಹಳೆ ಬಾರಿಸುತ್ತಾ ಇದ್ದರು. ಮಾಸ್ತರರು ಶಿವಕಾಡಿಯವರ ತೋಟದಲ್ಲಿ ಸ್ವಾತಂತ್ರ್ಯದ ಬಗ್ಗೆ ಜನರಿಗೆ ಹೇಳುತ್ತಿದ್ದರು. ಬ್ರಿಟಿಷರ ಫೌಜುದಾರ ಹಿಡಿಯಲು ಬಂದಾಗ ಬನಹಟ್ಟಿ, ರಾಮಪೂರ, ನಾವಲಗಿಗೆ ಪಲಾಯನ ಮಾಡಿದರು ಮಾಸ್ತರರು. ನಂತರ ಬನಹಟ್ಟಿ ರಾಂಪುರದಲ್ಲಿ ತಿರುಗುತ್ತಿದ್ದರು. ಹೀಗೆ ಸ್ವಾತಂತ್ರ್ಯದ ಕಹಳೆಯನ್ನು ಎಲ್ಲ ಕಡೆ ಪಸರಿಸುವಾಗ ಅವರಿಗೆ ವಿಪರೀತ ಜ್ವರ ಬಂದವು. ಹಾಸಿಗೆ ಹಿಡಿದರು. ಮನೆಯಲ್ಲಿದ್ದ ವಿಷಯವನ್ನು ದ್ರೋಹಿಗಳು ಹೇಳಿದರು ಅವರನ್ನ ಕಟ್ಟಿ ಗುಂಡು ಹಾರಿಸಲು ಯತ್ನಿಸಿದರು. ಆದರೆ ಗುಂಡು ಹಾರಲಿಲ್ಲ ಕಾರಣ ಮಾಧವಾನಂದರ ಆಶೀರ್ವಾದ ಇತ್ತು. ಇವರನ್ನು ಬಂಧಿಸಿದರು. ನಂತರದಲ್ಲಿ ಒಂದು ತಿಂಗಳಿನ ನಂತರದಲ್ಲಿ 1947 ಅಗಸ್ಟ್ 15 ರಂದು ಭಾರತವು ಸ್ವತಂತ್ರವಾಯಿತು ನಂತರ ಜಮಖಂಡಿ ಸಂಸ್ಥಾನವು 08-03-1948 ಅಖಿಲ ಭಾರತ ಒಕ್ಕೂಟದಲ್ಲಿ ವಿಲೀನವಾಯಿತು. ಕಲಕಂಬ ಮಾಸ್ತರರು ಕರ್ನಾಟಕ ಏಕೀಕರಣ ಮಹಾಸಮಿತಿ ಸದಸ್ಯರಾಗಿದ್ದರು, ನಂತರ ದಿನಗಳಲ್ಲಿ ಆರೋಗ್ಯವು ಕ್ಷೀಣಿಸುತ್ತಾ ಹೋಯಿತು, ತುಕಾರಾಮ ಕೊರ್ಪಡೆ ಸಹಾಯ ಸಹಕಾರ ನೀಡಿ ಔಷಧೋಪಚಾರ ಮಾಡುತ್ತಿದ್ದರು. ಪುಸಾರಾಮ ಅವರು ಅವರ ಮನೆಗೆ ಹೋಗುವವರ ಹತ್ತಿರ ಕಾಳುಕಡಿ ಸಂತೆ ಮಾಡಿಕೊಡುತ್ತಿದ್ದರು. ಹೀಗೆ 1954 ರವರೆಗೆ ಜೀವನ ನೂಕಿದರು ಮುಂದೆ ಮಿದುಳಿನ ರಕ್ತ ಸ್ರಾವವಾಗಿ ಕೊನೆಗೆ 20/03/1956 ರಂದು ಮರಣ ಹೊಂದಿದರು. ಕಲಕಂಬ ಮಾಸ್ತರು ಜೀವನ ಉದ್ದಕ್ಕೂ ದೇಶ ಸೇವೆಯೇ ಈಶ ಸೇವೆ ಎಂದು ಹೋರಾಡಿದರು. ಹಣವನ್ನು ಮಾಡಿಕೊಳ್ಳದ ಇವರು ಕೊನೆಗೆ ಶವ ಸಂಸ್ಕಾರಕ್ಕೆ ಸಹ ಹಣವಿರಲಿಲ್ಲ. ಊರಿನ ಜನರು ಹಣವನ್ನು ಸಂಗ್ರಹಿಸಿ ಶವ ಸಂಸ್ಕಾರವನ್ನು ಮಾಡಿ ಉಳಿದ ಹಣವನ್ನು ಧರ್ಮಪತ್ನಿ ಕಾಳವ್ವನಿಗೆ ನೀಡಿದರು.

**ಚಿನ್ನಪ್ಪಾ ಕಾಡಪ್ಪಾ ಧಬಾಡಿ:**

ಚಿನ್ನಪ್ಪ ಕಾಡಪ್ಪ ದಬಾಡಿ ಇವರು 1901 ರಲ್ಲಿ ಬನಹಟ್ಟಿಯಲ್ಲಿ ಕಾಡಪ್ಪ ಹಾಗೂ ನೀಲಮ್ಮ ದಂಪತಿಗಳ ಉದರದಲ್ಲಿ ಜನಿಸಿದರು. ಪ್ರೌಢಾವಸ್ಥೆಗೆ ಬಂದ ನಂತರದಲ್ಲಿ ಗಂಗಮ್ಮ ರೊಂದಿಗೆ ಇವರ ವಿವಾಹವಾಯಿತು. ಚಿನ್ನಪ್ಪನವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿಕೊಂಡು ನೇಕಾರಿಕೆಯ ವೃತ್ತಿಯಲ್ಲಿ ತೊಡಗಿಕೊಂಡರು. ವ್ಯಾಪಾರದ ವೃತ್ತಿಯನ್ನು ಮಾಡುತ್ತಾ ಇವರು ರಬಕವಿಯ ಶ್ರೀಮಂತರಾದ ಮಾಂಡವಕರ ಅವರಿಗೆ ಪರಿಚಯವಾದರು. ಇವರಿಗೆ ಮಾಂಡವಕರ ಅವರು ನೌಕರಿ ಕೊಟ್ಟರು. ನಂತರದಲ್ಲಿ ನೌಕರಿಯನ್ನು ಬಿಟ್ಟು ಸೀರೆ ವ್ಯಾಪಾರದಲ್ಲಿ ತೊಡಗಿಕೊಂಡು ಮುಂಬೈನಲ್ಲಿ ಅಂಗಡಿಯನ್ನು ತೆರೆದು ಸೀರೆ ವ್ಯಾಪಾರ ಆರಂಭಿಸಿದರು. ಇವರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವುದು ಇವರ ಕನಸು ಆಗಿತ್ತು. ಚಿನ್ನಪ್ಪ ಅವರಿಗೆ ಸಹಚಾರಿಗಳೆಂದರೆ, ವಿ.ಕೆ. ಮಾಳಾಪೂರ, ಕಲಕಂಬ ಮಾಸ್ತರರು, ತುಕಾರಾಮ ಕೋಪರ್ಡೆ, ಮಲ್ಲಪ್ಪ ನುಚ್ಚಿ, ಪರಪ್ಪಾ ಮಂಡಿ, ಬಸಪ್ಪಾ ಪಟ್ಟಣ, ಭಾಸ್ಕರ ಕೋಪರ್ಡೆ ಇವರ ಸಹಚರರು ಆಗಿದ್ದರು. ಜರ್ಮನ್ನರು ಇಂಗ್ಲೆಂಡ್ ಮೇಲೆ ಬಾಂಬ್ ಹಾಕಿದ ಸಂದರ್ಭದಲ್ಲಿ ಬ್ರಿಟಿಷರಿಗೆ ಹಣದ ಅವಶ್ಯಕತೆ ಇತ್ತು, ಆಗ ಗಾಂಧೀಜಿಯವರು ತಿಳಿದು ಆಂದೋಲನ ಆರಂಭಿಸಿ, ಬ್ರಿಟಿಷರಿಗೆ ಹಣ ನೀಡುವುದು ಪಾಪ ಎಂದು ಹೇಳಿದರು. ಗಾಂಧೀಜಿಯವರ ಸತ್ಯಾಗ್ರಹದ ಪ್ರಭಾವ ಚಿನ್ನಪ್ಪರವರ ಮೇಲೆ ಬೀರಿತು.

**ಕೊಡುಗೆಗಳು:**

ಚಿನ್ನಪ್ಪನವರು 20-05-1941 ರಲ್ಲಿ ಅಥಣಿ ತಾಲೂಕಿನ ಮಹಿಷವಾಡಗಿಯಲ್ಲಿ ವೈಯಕ್ತಿಕ ಸತ್ಯಾಗ್ರಹದಲ್ಲಿ ತೊಡಗಿದ್ದರಿಂದ ಸರಕಾರವು ಇವರನ್ನು ಬಂಧಿಸಿ, ಅಥಣಿ ಕಾರಾಗೃಹದಲ್ಲಿರಿಸಿತ್ತು. ನಂತರ ಬೆಳಗಾವಿಯ ಹಿಂಡಲಗಾ ಜೈಲಿಗೆ ರವಾನಿಸಿ 6 ತಿಂಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು 200 ರೂ. ದಂಡ ವಿಧಿಸಿದರು. ದಂಡ ಕೊಡದಿದ್ದರೆ ಮತ್ತೇ 2 ತಿಂಗಳು ಜೈಲು ಶಿಕ್ಷೆ ಎಂದರು. ಹೀಗಾಗಿ 8 ತಿಂಗಳು ಕಾರಾಗೃಹ ಶಿಕ್ಷೆ ಅನುಭವಿಸಿದರು. ಶಿಕ್ಷೆ ಅನುಭವಿಸಿ ಬಂದ ನಂತರದಲ್ಲಿ ಇವರ ಕ್ರಾಂತಿಕಾರಿ ಚಟುವಟಿಕೆಗಳ ವೇಗವು ಹೆಚ್ಚಾಯಿತು. ಹಳ್ಳಿ ಹಳ್ಳಿಗಳಲ್ಲಿ ಪರದೇಶಿ ಬಟ್ಟೆ ಹಾಗೂ ಹೆಣ್ಣು ಮಕ್ಕಳಿಗೆ ಪರದೇಶಿ ಬಟ್ಟೆ ಧರಿಸಬೇಡಿ, ಪರದೇಶಿ ಬಳೆಗಳನ್ನು ಹಾಕಬೇಡಿ ಎಂದು ಹೇಳಿದರು. ಸಿಂದಿ-ಸೆರೆ ಅಂಗಡಿ ಮುಂದೆ ಪಿಕೇಟಿಂಗ್ ಮಾಡಿದರು. ಒಂದು ದಿನ ಬನಹಟ್ಟಿಯಲ್ಲಿ ಆಂಗ್ಲರ ವಿರುದ್ಧವಾಗಿ ಮತ್ತು ಆಳರಸರಾದ ಜಮಖಂಡಿ ಮಹಾರಾಜರಾದ ಪಟವರ್ಧನ ಅವರನ್ನು ಹೀನಾಯವಾಗಿ ಹೀಯಾಳಿಸಿ ಅವರ ದೌರ್ಜನ್ಯದ ಬಗ್ಗೆ ಹೇಳಿದರು. ಇಲ್ಲಿ ಚಿನ್ನಪ್ಪನವರು ಈ ಸಭೆಯ ಅಧ್ಯಕ್ಷತೆ ವಹಿಸಿದರು. ತುಕಾರಾಮ ಕೋಪರ್ಡೆ, ಮಾರುದ್ರಪ್ಪಾ ಮುರಗೋಡ ಸಹ ಇದ್ದರು, ಇವರನ್ನು ಬಂಧಿಸಿದರು. ಆಗ ಜಮಖಂಡಿ ಕೋರ್ಟಿನಲ್ಲಿ ವಿಚಾರಣೆ ನಡೆಯಿತು. ತುಕಾರಾಮ ಕೋಪರ್ಡೆ ಮತ್ತು ಮಾರುದ್ರಪ್ಪಾ ಮುರಗೋಡ ಅವರಿಗೆ ವಯಸ್ಸು ಕಡಿಮೆ ಇದ್ದ ಕಾರಣ ಅವರನ್ನು ಬಿಟ್ಟರು. ಆದರೆ ಚಿನ್ನಪ್ಪನವರಿಗೆ 6 ತಿಂಗಳು ಕಾರಾಗೃಹ ಶಿಕ್ಷೆ ವಿಧಿಸಿದರು, ಜಮಖಂಡಿ ಜೈಲು ತುಂಬಿದ ಕಾರಣ ಚಿನ್ನಪ್ಪ ಅವರನ್ನು ಸಂಸ್ಥಾನಿಕರ ಗೋಡೌನಿನಲ್ಲಿ 4 ದಿನ ಬಂಧಿಸಿ ಮುಂದೆ ಮುಂಬೈ ಸೆಂಟ್ರಲ್ ಜೈಲಿಗೆ ಸ್ಥಳಾಂತರಿಸಿದರು. ಈ ಜೈಲಿನಲ್ಲಿ ರಾಜಕೀಯ ಕೈದಿಗಳಾದ ಅನ್ನುಗುರೂಜಿ ಪಾಟೀಲ್, ಅಣ್ಣಪ್ಪಗೌಡ್ರ್ ಪಾಟೀಲ್ (ಇಂದಿನ ಸಂಕೇಶ್ವರ ಫ್ಯಾಕ್ಟರಿ ಸಂಸ್ಥಾಪಕರು) ಇವರ ಭೇಟಿಯಾಯಿತು. ಮತ್ತೆ ಇವರ ಸ್ವಾತಂತ್ರ್ಯದ ಕಿಚ್ಚು ಹೆಚ್ಚಾಯಿತು. ಭೂಗತ ಯೋಧರಿಗೆ ಗೋಧಿ, ಬೆಲ್ಲ, ಅಕ್ಕಿ ಉಚಿತವಾಗಿ ನೀಡಿ ಸಹಾಯ ಮಾಡಿದರು. ಜಮಖಂಡಿ ಸಂಸ್ಥಾನದ ಪ್ರಜಾಪರಿಷತ್ತಿನಲ್ಲಿ ಬನಹಟ್ಟಿಯಿಂದ ಆಯ್ಕೆ ಆಗಿ ಶಾಸಕರಾಗಿ ಜನಹಿತಕಾರ್ಯ ಮಾಡಿದರು. ನಂತರ ಮಂಗಳವಾರ ಪೇಟೆಯ ದೈವ ಮಂಡಳಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಅಂದಾನಪ್ಪ ದೊಡ್ಡಮೇಟಿ, ಎಸ್. ನಿಜಲಿಂಗಪ್ಪ, ಶಾಂತಿನಾಥ ಇಂಗಳೆ, ಕಳ್ಳಿ ತಿಪ್ಪಣ್ಣಶಾಸ್ತ್ರಿ, ಹೂಲಿ ವೆಂಕಟರೆಡ್ಡಿ, ಕಟಗೇರಿ ವೆಂಕಣ್ಣಶಾಸ್ತ್ರಿ, ಚಿನ್ನಯಸ್ವಾಮಿ ಬೆಂಕಿಮಠ, ಚನ್ನಪ್ಪವಾಲಿ ಇಂತಹ ವೀರಯೋಧರೊಂದಿಗೆ ನಿಕಟವಾದ ಸಂಬಂಧ ಹೊಂದಿದ್ದರು. ಚಿನ್ನಪ್ಪನವರ ಧರ್ಮ ಪತ್ನಿ ಗಂಗಮ್ಮ ಬಂದು ಹೋಗುವ ಭೂಗತಯೋಧರಿಗೆ ಊಟ ಉಪಚಾರ ನೀಡುತ್ತಿದ್ದರು. ಕನ್ನಡ ನಾಡಿನ ಏಕೀಕರಣ ಚಳುವಳಿಯಲ್ಲಿ ಚಿನ್ನಪ್ಪನವರು ಭಾಗವಹಿಸಿ ಯಶಸ್ವಿ ಆದರು. 1978 ರಲ್ಲಿ ಚಿನ್ನಪ್ಪನವರು ಬನಹಟ್ಟಿಯಲ್ಲಿ ಮರಣ ಹೊಂದಿದರು.

**ಭಾಸ್ಕರ್ ಜೀವಾಜಿ ಕೋಪರ್ಡೆ:**

ಭಾಸ್ಕರ್ ಕೋಪರ್ಡೆ ಇವರು ಜೀವಾಜಿ ಸೋಮವ್ವ ಇವರ ಉದರದಲ್ಲಿ 1920 ರಂದು ಬನಹಟ್ಟಿಯಲ್ಲಿ ಜನಿಸಿದರು. ಇವರು ಪ್ರೌಢಾವಸ್ಥೆಗೆ ಬಂದ ನಂತರದಲ್ಲಿ ಇವರಿಗೆ ಸುಭದ್ರಾ ಎಂಬ ಮಹಿಳೆಯೊಂದಿಗೆ ವಿವಾಹವಾಯಿತು. ಭಾಸ್ಕರ ಎಂದರೆ ಸೂರ್ಯ ಈ ರೀತಿಯ ನಾಮಾಂಕಿತವನ್ನು ಇಟ್ಟುಕೊಂಡ ಇವರು ಇವರ ಕುಟುಂಬವು ಇಂಚಗೇರಿ ಸಂಪ್ರದಾಯದ ಕುಟುಂಬವಾಗಿತ್ತು. ಶ್ರೀ ಸ. ಸ. ಗಿರಮಲೇಶ್ವರ, ಮಾಧವಾನಂದರ ಪರಮ ಭಕ್ತರಾಗಿದ್ದರು. ಸಾತ್ವಿಕ ಪರಂಪರೆಯ ಸಂಪತ್ತು ಬೆಳೆದು ಬಂದಿತ್ತು. ಭಾಸ್ಕರರ ವಿದ್ಯಾಭ್ಯಾಸವು ಪ್ರಾಥಮಿಕ ಶಿಕ್ಷಣಕ್ಕೆ ಮುಕ್ತಾಯವಾಯಿತು. 16ನೇ ವಯಸ್ಸಿನಲ್ಲಿ ಶ್ರೀ ಗಿರಮಲ್ಲೇಶ್ವರರ ಅನುಗ್ರಹಿತರಾಗಿ

ಜ್ಞಾನೋಪಾಸನೆಗಳಿಂದ ತಮ್ಮ ವ್ಯಕ್ತಿತ್ವವನ್ನ ರೂಪಿಸಿಕೊಂಡರು. ನಂತರದಲ್ಲಿ ಬನಹಟ್ಟಿಯ ವ್ಯಾಪಾರಿಗಳಾದ ನನ್ನು ಸಾಹೇಬ್ ಲಾಡಜಿ ಅವರ ಮುಂಬೈನಲ್ಲಿರುವ ಅಂಗಡಿಯಲ್ಲಿ ನೌಕರಿ ಮಾಡುತ್ತಿದ್ದರು. ಶ್ರೀ ಗಿರಮಲ್ಲೇಶ್ವರರು ತಮ್ಮ ಭವಿಷ್ಯವಾಣಿಯಿಂದ ಭಾರತೀಯ ಸ್ವಾತಂತ್ರ ಸಂಗ್ರಾಮದಲ್ಲಿ ಪ್ರಾಣದ ಹಂಗು ತೊರೆ ಎಂದು ಹೇಳಿದಾಗ ಹೋರಾಟಕ್ಕೆ ಕಾಲಿಟ್ಟರು. ಬನಹಟ್ಟಿಯ ಕಲಕಂಬ ಮಾಸ್ತರು, ತುಕಾರಾಂ ಕೋಪರ್ಡೆ, ನಿಂಗಪ್ಪ ಅಂಟಿನ್, ಪುಸಾರಾಮ್, ಪರಯ್ಯ ಬಂಗಿ, ಲಕ್ಷ್ಮಣ ಮೋಪಗಾರ, ಗಂಗಪ್ಪ ದಭಾಡಿ, ನಾಮದೇವ ಕೋಪರ್ಡೆ, ಕಲ್ಯಾಣಿ ತುಂಗಾಳ, ಬಸವಣ್ಣಪ್ಪ ಮಟ್ಟಿಕಲ್ಲಿ, ಸಿದ್ದಪ್ಪ ಹಾಲಸಿಕರ, ಶಿವಯೋಗಪ್ಪ ಒಡ್ಡೋಡ್ಗಿ, ಇವರೆಲ್ಲರ ಸಂಪರ್ಕದಲ್ಲಿ ಭಾಸ್ಕರರು ಇದ್ದರು.

**ಕೊಡುಗೆಗಳು:**

ಬಿಜಾಪುರ ಜಿಲ್ಲೆಯ ಹೊನವಾಡ ಗ್ರಾಮದಲ್ಲಿ ವೈಯಕ್ತಿಕ ಸತ್ಯಾಗ್ರಹ ಮಾಡಿ ನಾಲ್ಕು ತಿಂಗಳು ಬಿಜಾಪುರ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು. ಶಿಕ್ಷೆ ಮುಗಿಸಿ ಬಂದು ರಾಷ್ಟ್ರೀಯ ಚಟುವಟಿಕೆಗಳ ಮುಖಂಡರಾದ ಗಾಂಧಿ, ನೆಹರು, ಪಟೇಲ್ ಮುಂತಾದವರ ಆದೇಶದಂತೆ ಸೇವೆ ಮಾಡಹತ್ತಿದರು. ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಮಹಿಷಾವಾಡಗಿ ಗ್ರಾಮದಲ್ಲಿ ಮತ್ತೊಂದು ವೈಯಕ್ತಿಕ ಸತ್ಯಾಗ್ರಹ ಮಾಡಿ 9 ತಿಂಗಳು ಜೈಲುವಾಸ ಅನುಭವಿಸಿದರು. 1942 ರ ಗೋವಾಲಿಯ ಮೈದಾನದಲ್ಲಿ ಚಲೇಜಾವ್ ಚಳುವಳಿ ಪಾಸ್ ಆಯಿತು, ಅಲ್ಲಿ ಗಾಂಧಿ, ನೆಹರು, ಪಟೇಲರ ಬಂಧನವಾಯಿತು. ಕ್ರಾಂತಿ ಚುರುಕಾಯಿತು. ಬನಹಟ್ಟಿ ಸುತ್ತಮುತ್ತಲಿನ 4 ರಿಂದ 5 ಮೈಲಿ ತಾರತಂತಿ ಹರಿದರು. ಜಂಗಮ, ಬುಡಬುಡಕಿ, ಶಂಖದಯ್ಯ, ಜೋಗಪ್ಪ ವೇಷಧಾರಿಗಳನ್ನ ಧರಿಸಿಕೊಂಡು ತಿರುಗಹತ್ತಿದರು. ಕ್ರಾಂತಿವೀರ ಭಾಸ್ಕರರು ಪರಾರಿಯಾಗಿ ತಿರುಗುತ್ತಿದ್ದಾಗ 17 ವರ್ಷದ ತಮ್ಮನಾದ ರಾಮಕೃಷ್ಣ, ಅಣ್ಣನಾದ ಶಂಭು, ಮೂರು ವರ್ಷದ ಮಗ ಹಾಗೂ ಅಜ್ಜಿ ಸತ್ತರು ಮಣ್ಣಿಗಿರಲಿಲ್ಲ, ಕಾರಣ ಅವರನ್ನು ಬಂಧಿಸಲು ಆಂಗ್ಲರ ಅಧಿಕಾರಿಗಳು ತಿರುಗುತ್ತಿದ್ದರು.

ಬೆಳಗಾವಿಯಲ್ಲಿ ತಪ್ಪಿಸಿಕೊಂಡು ಮುಂದೆ ಬೆಳಗಾವಿಯ ಏರಿಮುನ್ನೋಳಿಯಲ್ಲಿ ತಂಗಿದ್ದರು. ಅಲ್ಲಿಂದ ತಪ್ಪಿಸಿಕೊಂಡವರು ಪಿ. ಎಲ್. ಪಾಟೀಲರ ಮನೆಯಲ್ಲಿ ತಂಗಿದಾಗ ಪರಾರಿಯಾದರೂ ರಬಕವಿಯಲ್ಲಿ ಬಂಧಿಸಲು ಯತ್ನಿಸಿದಾಗ ಸಿಗಲಿಲ್ಲ, ನಂತರದಲ್ಲಿ ಇವರಿಗೆ ಕ್ಷೇತ್ರ ಸೀಮಿತವಾಗಿರಲಿಲ್ಲ ಬಿಜಾಪುರ, ಧಾರವಾಡ, ಬೆಳಗಾವಿ, ಕಾರವಾರ ಇಂತಹ ಪ್ರದೇಶಗಳಿಗೆ ಹೋಗಿ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚುತ್ತಿದ್ದರು. ಭಾರತಾಂಬೆಯ ವಿಮೋಚನೆಗೆ ಹೋರಾಡಲು ನನಗೆ ನನ್ನ ಗುರುಗಳಾದ ಶ್ರೀ ಮಹಾದೇವರು ಹಾಗೂ ಮಹಾತ್ಮ ಗಾಂಧೀಜಿಯವರ ಆಶೀರ್ವಾದವೇ ಕಾರಣ ಎಂದು ಹೇಳಿದ್ದಾರೆ.

**ಶ್ರೀಮತಿ. ಸುಭದ್ರಾ ಭಾ. ಕೋರ್ಪಡೆ:**

ಸುಭದ್ರಾ ಅವರು ಕೃಷ್ಣಾಥ ಗುರುಬಾಯಿ ದಂಪತಿಗಳ ಮಗಳಾಗಿ 1925 ರಂದು ಗೋಕಾಕದಲ್ಲಿ ಜನಿಸಿದರು. ಕೃಷ್ಣಾಥ ಅವರು ತವಕದ ಬಾಳಯ್ಯ ಸ್ವಾಮಿಯವರ ಪರಮ ಭಕ್ತರಾಗಿದ್ದರು. ಸುಭದ್ರಾರವರು ಪ್ರಾಥಮಿಕ ಶಿಕ್ಷಣದ ವರೆಗೆ ಕಲಿತು ವಿದಾಯ ಹೇಳಿ ನಂತರದಲ್ಲಿ ಬನಹಟ್ಟಿಯ ಕೋರ್ಪಡೆ ಅವರೊಡನೆ ಸಂಬಂಧವನ್ನು ಬೆಳೆಸಿದರು. ಕೋರ್ಪಡೆಯವರ ತಂದೆ ಗೋಕಾಕಕ್ಕೆ ಹೋಗಿ ಸುಭದ್ರಾ ತಾಯಿಯವರಾದ ಗುರುಬಾಯಿಗೆ ಕೇಳಿದರು. ಆಗ ಬಾಳಯ್ಯ ಅವರ ಅಪ್ಪಣೆ ಪಡೆದು ಇಂಚಗೇರಿ ಸಂಪ್ರದಾಯಕ್ಕೂ ತವಕದ ತತ್ವ ಬೆಸುಗೆ ಇತ್ತು. ಅನುಮಾನ ಇಲ್ಲದೆ ಕೂಡಿ ಬಂದಾಗ ಭಾಸ್ಕರ ಅವರ ಲಗ್ನವು ಸುಭದ್ರಾ

ಅವರೊಂದಿಗೆ ಆಯಿತು.

ಭಾಸ್ಕರ ಹೊನವಾಡದಲ್ಲಿ ಪ್ರಥಮ ವೈಯಕ್ತಿಕ ಸತ್ಯಾಗ್ರಹ ಮಾಡಿ ಶಿಕ್ಷೆಯನ್ನು ಅನುಭವಿಸಿ ಬಂದರು, ಆಗ ಸುಭದ್ರಾ ಅವರು ಮನೆಯಲ್ಲಿ ಇದ್ದರು. ನಂತರದಲ್ಲಿ ಎರಡನೇ ಸತ್ಯಾಗ್ರಹವಾದ ಅಥಣಿಯ ಮಹಿಷವಾಡಗಿಯಲ್ಲಿ ವೈಯಕ್ತಿಕ ಸತ್ಯಾಗ್ರಹ ಮಾಡಿದಾಗ ಸುಭದ್ರಾ ಅವರು ತಮ್ಮ ಪತಿಯ ಹಣೆಗೆ ಕುಂಕುಮ ಹಚ್ಚಿ ಆರತಿ ಮಾಡಿ ಬರಮಾಡಿಕೊಂಡರು. ಕೆಲವು ದಿನಗಳ ನಂತರದಲ್ಲಿಯೇ ಮಗ ಭಾರತೀಶನು ಮರಣ ಹೊಂದಿದನು. ಸುಭದ್ರಾ ಮಗನ ಮುಖ ನೋಡಿ ಕಂಗಾಲಾದಳು. ಇದೇ ಸಂದರ್ಭದಲ್ಲಿ ಜಮಖಂಡಿಗೆ ಕಾಂಗ್ರೆಸ್ ಮುಖಂಡರಾದ ಎಂ.ಪಿ ಪಾಟೀಲ್, ಅಂದಾನಪ್ಪ ದೊಡ್ಡಮೇಟಿ, ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳು, ಟಿ.ಆರ್ ನೆಚ್ಚಿ, ತಲ್ಲೂರ ರಾಯನ ಗೌಡ್ರು ಇವರೆಲ್ಲರ ಜೊತೆ ಸಾರ್ವಜನಿಕ ಚರ್ಚೆಗಾಗಿ ಶ್ರೀ ಮಾಧವಾನಂದರು ಬಂದಿದ್ದರು, ಅವರನ್ನು ಸಾವಳಗಿ ಪ್ರಕರಣದ ನೆವಹಚ್ಚಿ ಜಮಖಂಡಿ ಜೈಲಿನಲ್ಲಿ ಬಂಧಿಸಿದರು. ಆಗ ಮಹಾದೇವರು ತೇಗುರ ಗೌಡತಿಯಿಂದ ಸುಭದ್ರಾದೇವಿಯನ್ನು ಕರೆಸಿದರು, ಕಾರಣ ಮಗ ಮರಣ ಹೊಂದಿದ್ರು. ನಂತರ ಸುಭದ್ರಾ ದೇವಿಯನ್ನು ಮಾತನಾಡಿಸಿದ ಮಾಧವಾನಂದರು ಹೇಳಿದರು, ದುಃಖಿಸಬೇಡ ನೀನು ಗುರು ಪುತ್ರಿ ಇರುವೆ ನಿನ್ನ ಪತಿ ಭಾಸ್ಕರ ಹೋಗಬೇಕಾದಲ್ಲಿದೆ ಭಾರತೀಶನನ್ನು ಕಳಿಸಿದ್ದೇನೆ ಚಿಂತಿಸಬೇಡ ತಾಯಿ ಎಂದು ಹೇಳಿದರು.

**ಕೊಡುಗೆಗಳು:**

ವೀರ ವನಿತೆಯಾದ ಸುಭದ್ರಾ ಅವರು ಯಮನಪ್ಪ ಅರಭಾವಿಯ ಧರ್ಮಪತ್ನಿಯೊಂದಿಗೆ ಸೇರಿ ಗೋಕಾಕ ತಾಲೂಕಿನ ಅಕ್ಕತಂಗೆರ ಹಳ್ಳಿ ಎಂಬ ಗ್ರಾಮದಲ್ಲಿ ಸೈನ್ಯ ಕಟ್ಟಿಕೊಂಡು ಹೋಗಿ ದಾಳಿ ಮಾಡಿ ಮಾಮಲೇದಾರರ ಕಾಗದ ಪತ್ರಗಳನ್ನು ಸುಟ್ಟು ಹಾಕಿದರು. ನಂತರ ಇವಳನ್ನು 11 ತಿಂಗಳ ಕೂಸಿನೊಂದಿಗೆ ಬಂಧಿಸಿದರು. ನಂತರದಲ್ಲಿ ಭೂಗತ ಯೋಧರಿಗೆ ಊಟ ಉಪಚಾರ ಮತ್ತು ಅವರನ್ನು ರಕ್ಷಿಸುವ ಕಾರ್ಯವನ್ನು ಸುಭದ್ರಾರವರು ಮಾಡುತ್ತಿದ್ದರು.

**ಬನಹಟ್ಟಿಯ ಸ್ವಾತಂತ್ರ್ಯ ಹೋರಾಟಗಾರರು:**

ಅಯ್ಯಪ್ಪ ಬಾಗಲಕೋಟೆ, ರಾಮಪ್ಪ ಚಿಂಚೂರ್, ಬನ್ನಪ್ಪ ಅಜ್ಜಪ್ಪಗೊಳ, ಬಸವಂತ ಚನಾಳ, ಕಲ್ಯಾಣಪ್ಪ ತುಂಗಳ, ಚಿನ್ನಪ್ಪ ಕಾಡಪ್ಪ ದಬಾಡಿ, ಲಕ್ಷ್ಮಣಪ್ಪ ಮೋಪಗಾರ, ಮಲ್ಲಪ್ಪ ಬುಟ್ಟಿನವರ, ತುಕಾರಾಂ ಕೋಪರ್ಡೆ, ದಾದೋಬಾ ಜಾದವ , ಬಸಪ್ಪ ಪಟ್ಟಣ, ಸಿದ್ದಪ್ಪ ಹಾಲಸಿಕರ, ನಿಂಗಪ್ಪ ಆಂಟಿನ, ಸಿದ್ದಪ್ಪ ಕೆಸರಗೊಪ್ಪ, ಮಲ್ಲಪ್ಪ ಕುಂಬಾರ, ಬಸವಣ್ಣಪ್ಪ ಮಟ್ಟಿಕಲ್ಲಿ, ಗಂಗಾಧರ ಟೋಗುಲ್ಲ ಇವರು ಕೂಡ ಸ್ವಾತಂತ್ರ್ಯ ಹೋರಾಟಕ್ಕೆ ಶ್ರಮಿಸಿದ ಸ್ವಾತಂತ್ರ್ಯ ಹೋರಾಟಗಾರರಾಗಿದ್ದಾರೆ.

**ಉಪಸಂಹಾರ:**

ಬಾಗಲಕೋಟೆ ಜಿಲ್ಲೆಯ ಬನಹಟ್ಟಿ ನಗರವು ಕರ್ನಾಟಕದ ಇತಿಹಾಸದಲ್ಲಿ ತನ್ನದೇ ಆದ ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಈ ಪ್ರದೇಶವು ಜಮಖಂಡಿ ಪಟವರ್ಧನ ಸಂಸ್ಥಾನಕ್ಕೆ ಸ್ವಾತಂತ್ರ್ಯ ಸಂದರ್ಭದಲ್ಲಿ ಒಳಪಟ್ಟರು, ಅಲ್ಲಿ ಬ್ರಿಟಿಷರ ಆಡಳಿತದ ದಬ್ಬಾಳಿಕೆಯನ್ನು ಸಹ ಕಾಣಬಹುದು. ಜಮಖಂಡಿಯ ರಾಜರು ಬ್ರಿಟಿಷರಿಗೆ ವಿಧೇಯತೆ ತೋರಿದರು. ಆದರೂ ಜನರು ಬ್ರಿಟಿಷರಿಗೆ ವಿಧೇಯತೆ ತೋರಲಿಲ್ಲ. ಬನಹಟ್ಟಿ ಸ್ವಾತಂತ್ರ್ಯದ ಕಿಚ್ಚು ಹುಟ್ಟಲು ಮೂಲ ಕಾರಣವೆಂದರೆ ಇಂಚಗೇರಿಯ ಮಾಧವಾನಂದ ಪ್ರಭುಗಳು ಮತ್ತು ಬನಹಟ್ಟಿಯ ಕಲಕಂಬ

ಮಾಸ್ತರು ಎನ್ನಲಾಗಿದೆ. ಮಾಧವಾನಂದರ ಪ್ರಭುಗಳ ಆದೇಶದಲ್ಲಿ ಎಲ್ಲಾ ಹೋರಾಟಗಳು ನಡೆದಿದ್ದವು. ಬನಹಟ್ಟಿಯ ಅನೇಕ ವ್ಯಕ್ತಿಗಳು ದೇಶವನ್ನು ಸ್ವತಂತ್ರಗೊಳಿಸುವ ಉದ್ದೇಶದಿಂದ ತಮ್ಮ ಮನೆಯನ್ನು ತೊರೆದು ಜೀವದ ಹಂಗು ತೊರೆದು ಹೋರಾಟದಲ್ಲಿ ಭಾಗವಹಿಸಿದರು. ಬನಹಟ್ಟಿ ಸ್ವಾತಂತ್ರ್ಯ ಹೋರಾಟಗಾರರಿಗೆ 1924ರ ಮಹಾತ್ಮ ಗಾಂಧೀಜಿಯವರ ಬೆಳಗಾವಿ ಕಾಂಗ್ರೆಸ್ ಅಧಿವೇಶನ ಮತ್ತು 1942ರ ಚಲೇಜಾವ್ ಚಳುವಳಿಯ ಪ್ರೇರಣೆಯಿಂದ ಬನಹಟ್ಟಿಯ ಯೋಧರು ತೀವ್ರವಾದ ಪ್ರತಿಭಟನೆಗಳನ್ನು ಮಾಡಿದರು ಎಂದು ತಿಳಿಯಲಾಗಿದೆ. ಸ್ವತಂತ್ರ ನಂತರದಲ್ಲಿ ಬನಹಟ್ಟಿಯ ನಗರದಲ್ಲಿ ಬೃಹತ್ ಮೆರವಣಿಗೆ ಮತ್ತು ವಿಜೃಂಭಣೆಯಿಂದ ಸ್ವತಂತ್ರ ದಿನವನ್ನು 1947 ಆಗಸ್ಟ್ 15 ರಂದು ಆಚರಿಸಿದರು ಎಂದು ತಿಳಿಯಲಾಗಿದೆ. ಬನಹಟ್ಟಿ ಸ್ವಾತಂತ್ರ್ಯ ಹೋರಾಟಗಾರರು ಕರ್ನಾಟಕದಲ್ಲಿ ತಮ್ಮದೇ ಆದ ಹೋರಾಟದ ಛಾಪನ್ನು ಮೂಡಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ಅರುಣ್ ಕಿರಿ ಮಂಜೇಶ್ವರ, (2022), ಭಾರತದ ಸ್ವಾತಂತ್ರ್ಯ ಹೋರಾಟದ ಮಜಲುಗಳು, ಬೆಂಗಳೂರು: ಉತ್ಥಾನ ಟ್ರಸ್ಟ್.
2. ಅಪ್ಪಣ್ಣಪ್ಪ ರಾಮಪ್ಪ ಜಂಬಗಿ, (1992), ಸ್ವಾತಂತ್ರ್ಯ ಸಂಗ್ರಾಮದ ಬನಹಟ್ಟಿ ಬಂಟರು, ಬನಹಟ್ಟಿ: ಸ್ವಾತಂತ್ರ್ಯ ಸಮರ ಸೇನಾನಿ ಸಂಘ.
3. ಮಟ್ಟೋಳ್ಳಿ ಎಸ್. ಬಿ., (2016), ಜಮಖಂಡಿ ಇತಿಹಾಸ ದರ್ಪಣ, ಜಮಖಂಡಿ: ಶ್ರೀರಂಗನಾಥ ಪ್ರಿಂಟರ್ಸ್.